**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

<u>ಸೆಷನ್ಸ್ ಕೇಸ್ ನಂಃ 3/2021</u> <u>ಪಿ.ಡಬ್ಲ್ಯೂಃ 5</u>

<u>ಸಿ.ಡಬ್ಲ್ಯೂಃ 6</u>

| | |
|---|---|
| ಸಾಕ್ಷಿದಾರರ ಹೆಸರು | ಸಂಶುದ್ದೀನ್ |
| ತಂದೆಯ ಹೆಸರು | ಅಬ್ದುಲ್ ರಜಾಕ್ |
| ವಯಸ್ಸು | 50 ವರ್ಷ |
| ಉದ್ಯೋಗ | ಗುತ್ತಿಗೆದಾರ |
| ವಿಳಾಸ | ಪಣಿಯೂರು, ಉಚ್ಚಿಲ |

ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನನಗೆ 2 ನೇ ಆರೋಪಿತರು ಮತ್ತು ಆತನ ಮೃತ ಸಹೋದರ ಗೊತ್ತು. ಅವರು ದೂರಿನ ಘಟನೆ ಅಗುವ 6 ತಿಂಗಳ ಮೊದಲಿನಿಂದಲೂ ಗೊತ್ತು. ಮೃತ ಗಾರೆ ಕೆಲಸ , 2 ನೇ ಅರೋಪಿ ಟೈಲ್ಸ ಕೆಲಸ ಮಾಡುತ್ತಿದ್ದ. ಅವರು ಮೂಲತಃ ಜಾರ್ಖಂಡನವರು. ಅವರು ಹೆಜಮಾಡಿಯ ಕರ್ನಿರೆ ಬಿಲ್ಡಿಂಗ್ ನಲ್ಲಿ ಬಾಡಿಗೆಗಾಗಿ ಇದ್ದರು. ಮನೆಯಲ್ಲಿ ಮೃತ, ಆತನ ಹೆಂಡತಿ, ಮಕ್ಕಳು ಮತ್ತು ಆರೋಪಿ, ಎಲ್ಲರೂ ಕೂಡಿಯೇ ಇರುತ್ತಿದ್ದರು. ನಾನು ಪಣಿಯೂರಿನಲ್ಲಿ ಕಟ್ಟಡದ ಗಾರೆ ಕೆಲಸ ಮಾಡಿಸುತ್ತಿದ್ದೆ, ಆಗ ಮೊದಲು 2 ನೇ ಅರೋಪಿಯನ್ನು ನೋಡಿ ಪರಿಚಯವಾಗಿತ್ತು, ಆತ ಆತನ ಅಣ್ಣನ ಬಗ್ಗೆ ಹೇಳಿದ್ದ. ನಂತರ ನಾನು ಅವರನ್ನು ನಮ್ಮ ಕೆಲಸಕ್ಕೆ ಸೇರಿಸಿಕೊಂಡಿದ್ಧೆ. ಅವರು ನನ್ನ ಬಳಿ 6 ತಿಂಗಳವರೆಗೆ ಕೆಲಸ ಮಾಡಿದ್ದರು.

2) 2020 ರ ಕೊರೋನಾ ವೇಳೆಯಲ್ಲಿ ತಾರೀಕು 21 ರಂದು ರಾತ್ರಿಯ ಸುಮಾರು 1 ಗಂಟೆಯ ನಂತರದ ಸಮಯದಲ್ಲಿ 2 ನೇ ಅರೋಪಿ ನನಗೆ ಪೋನ್ ಮಾಡಿ, ಆತನ ಅಣ್ಣ ಆದಿನ ರಾತ್ರಿಯ ಮನೆಯಿಂದ ಹೊರಗೆ ಹೋಗಿದ್ದು, ಇನ್ನು ಮನೆಗೇ ಬಂದಿಲ್ಲವೆಂದು, ಆತನ ಮೊಬೈಲ್ ನ್ನು ಮನೆಯಲ್ಲಿ ಬಿಟ್ಟು ಹೋಗಿರುವುದಾಗಿ ಹೇಳಿದ್ದ. ಸ್ವಲ್ಪ ನಹೊತ್ತಿನ ನಂತರ ಆತನಿಗೆ ಪೋನ್ ಮಾಡಿದ್ಧೆ

2 ನೇ ಅರೋಪಿ ಫೋನ್ ತೆಗೆಯಲ್ಲಿಲ್ಲ, ಆಗ ನಾನು ಮೃತನ ಮೊಬೈಲ್ ಗೆ ಫೋನ್ ಮಾಡಿದ್ದೆ. ಆಗ 1 ನೇ ಅರೋಪಿ ಫೋನ್ ತೆಗೆದುಕೊಂಡು, ಅವಳ ಗಂಡ ಮೊಬೈಲ್ ನ್ನು ಮನೆಯಲ್ಲಿ ಬಿಟ್ಟು ಹೋಗಿರುವುದಾಗಿ, ಮತ್ತು 2 ನೇ ಅರೋಪಿ ಆತನನ್ನು ಹುಡುಕಿಕೊಂಡು ಹೋಗಿರುವುದಾಗಿ ಹೇಳಿದ್ದಳು. ಸ್ವಲ್ಪ ಸಮಯದ ನಂತರ ನನಗೆ 2 ನೇ ಅರೋಪಿ ಫೋನ್ ಮಾಡಿ ಆತನ ಅಣ್ಣ ಮನೆಯಿಂದ ಸ್ವಲ್ಪ ದೂರದಲ್ಲಿ ರೋಡಿನಿಂದ ಕೆಳಗೆ ಮೋರಿಯಲ್ಲಿ ಬಿದ್ದಿದ್ದಾನೆಂದು ಹೇಳಿದ್ದ. ಅದಕ್ಕೆ ನಾನು ಆತನನ್ನು ಕಾರಿನಲ್ಲಿ ಆಸ್ಪತ್ರೆಗೆ ಬೇಗನೇ ತರಲು ಹೇಳಿದ್ದೆ. 2 ನೇ ಅರೋಪಿಗೆ ಆತನ ಅಣ್ಣನನ್ನು ಪಡುಬಿದ್ರೆಯ ಖಾಸಗಿ ಆಸ್ಪತ್ರೆಗೆ ತರಲು ಹೇಳಿದ್ದೆ. ನಾನು ಸಹ ಅಲ್ಲಿಗೆ ಅವರ ಬರುವ ಮೊದಲೇ ಹೋಗಿದ್ದೆ. 2 ನೇ ಅರೋಪಿ ಆತನನ್ನು ಕಾರಿನಲ್ಲಿ ತಂದಾಗ ನಾನು ಆದಿನ ನೋಡಿದ್ದೆ. ಆಗ ಆತ ಮಾತನಾಡುತ್ತಿರಲಿಲ್ಲ. ಆತನಿಗೆ ಗಾಯವಾಗಿದ್ದ ಬಗ್ಗೆ ಗಮನಿಸಲಿಲ್ಲ, ಆದರೆ ಬಟ್ಟೆಗಳು ನೀಟಾಗಿತ್ತು.

3) ಆದಿನ ಕಾರಿನಲ್ಲಿ ಮೃತನು, 2 ನೇ ಅರೋಪಿ, ಚಾಲಕ ಮತ್ತು ಚಾಸಾ-8 ಸಹ ಇದ್ದರು. ಆ ಆಸ್ಪತ್ರೆಯಲ್ಲಿ ನಮ್ಮನ್ನು ಒಳಗೆ ಬಿಟ್ಟುಕೊಳ್ಳದೇ, ಉಡುಪಿಯ ಅಜ್ಜರಕಾಡು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದರು. ಅದರಂತೆ ನಾವೆಲ್ಲರೂ ಅಲ್ಲಿಗೆ ಹೋಗಿದ್ದೆವು. ನಾನು ನಂತರ ಕಾರಿನಲ್ಲಿ ಅವರೊಂದಿಗೆ ಹೋಗಿದ್ದೆ. ಅಜ್ಜರಕಾಡಿನ ಆಸ್ಪತ್ರೆಯಲ್ಲಿ ತಪಾಸು ಮಾಡಿ, ಗಾಯಾಳುವಿನ ನಾಡಿ ಇಲ್ಲವೆಂದು, ಮತ್ತು ಶವ ಇಟ್ಟು ಕೊಳ್ಳಲು ಜಾಗ ಇಲ್ಲ ಎಂದು, ಮಣಿಪಾಲದ ಕೆಎಂಸಿ ಶವಾಗಾರಕ್ಕೆ ಹೋಗಬೇಕೆಂದು ಹೇಳಿದ್ದರು. ಅದರಂತೆ ಶವಗಾರದಲ್ಲಿ ಶವ ಇರಿಸಿದ್ದೆವು. ನಂತರ ಅದೇ ಕಾರಿನಲ್ಲಿ ನಾನು, 2 ನೇ ಅರೋಪಿ, ಚಾಸಾ -5 ಮತ್ತು 8 ಮರಳಿದ್ದೆವು. ಆ ಸಮಯದಲ್ಲಿ ಚಾಸಾ-8 ನನ್ನ ಬಳಿ 2 ನೇ ಅರೋಪಿಯ ಬಗ್ಗೆ ಸಂಶಯ ವ್ಯಕ್ತಪಡಿಸಿ, ಆತನ ಅಣ್ಣನನ್ನು ತೋಡಿಯಿಂದ ತೆಗೆಯವಾಗಲೂ ಬರಲಿಲ್ಲ, ಆಗಲೂ ಸಹ ಮೊಬೈಲ್ ನಲ್ಲಿ ಮಾತನಾಡಿಕೊಂಡಿದ್ದು, ನಂತರವೂ ಸಹ ಆತನ ನಡತೆಯಲ್ಲಿ ಸಂಶಯ ಇರುವುದಾಗಿ ಹೇಳಿದ್ದ.

4) ಮಾರನೇ ದಿನ ಬೆಳಿಗ್ಗೆ 6 ಗಂಟೆಯ ಸಮಯಕ್ಕೆ ನಾನು ನಮಾಜು ಮುಗಿಸಿ, ಆರೋಪಿಯ ಮನೆಗೆ ಹೋಗಿದ್ದೆ, ಅಲ್ಲಿ ಆರೋಪಿತರು ಮೊಬೈಲ್ ನಲ್ಲಿ ಆಟ

ಆಡುತ್ತಿದ್ದರು. ಮಕ್ಕಳು ಸಹ ಅವರಷ್ಟಕ್ಕೆ ಅವರು ಇದ್ದರು. ಆಗ ಸಂಶಯ ಬಂದ ನಾನು 1 ನೇ ಅರೋಪಿಯನ್ನು ವಿಚಾರಿಸಿ, ಅವಳ ಗಂಡನಿಗೆ ಏನು ಆಗಿತ್ತೆಂದು ಒತ್ತಾಯ ಮಾಡಿ ಕೇಳಿದ್ದೆ. ಆಗ ಅವಳು ನನಗೆ ಸರಿಯಾಗಿ ಉತ್ತರ ಕೊಡದೇ, ಮಾತನಾಡಲು ಆಗುತ್ತಿಲ್ಲ ಎಂದು ಹೇಳಿದಳು. ಅಷ್ಟರಲ್ಲಿ ಅಕ್ಕಪಕ್ಕದವರು ಸೇರಿದ್ದರು, ಅವರೂ ಸಹ ಆರೋಪಿತರ ಬಗ್ಗೆ ಸಂಶಯುತವಾಗಿ ಹೇಳಿದ್ದಲ್ಲದೆ, ಹಿಂದಿನ ರಾತ್ರಿ ಮೃತನೊಂದಿಗೆ ಅವರು ಸ್ಕೂಟರ್ ನಲ್ಲಿ ಹೊರಗೆ ಹೋಗಿದ್ದರು ಎಂದು ಹೇಳಿದ್ದರು. ಈ ವಿಷಯವಾಗಿ ಯಾರು ದೂರು ಕೊಟ್ಟಿದ್ದರು ಎಂದು ಗೊತ್ತಿಲ್ಲ. ಸಾಕ್ಷಿಯು ಪುನಃ ಹೇಳುತ್ತಿದ್ದು, 2 ನೇ ಅರೋಪಿ ಮಾರನೇ ದಿನ ಬೆಳಿಗ್ಗೆ ಅಪಘಾತವಾಗಿತ್ತು ಎಂದು ದೂರು ಕೊಟ್ಟಿದ್ದನು ಎಂದು ತಿಳಿದಿತ್ತು. ಅಕ್ಕಪಕ್ಕದವರು ಮತ್ತು ಊರಿನವರು ಹೇಳುವಂತೆ, ಅಪಘಾತದಲ್ಲಿ ಸಂಶಯ ಇದ್ದು, 2 ನೇ ಅರೋಪಿ ಆದಿನ ಬೇರೆಡೆಯಿಂದ ಸ್ಕೂಟರನ್ನು ತಂದು, ಅದರಲ್ಲಿ ಆತ, 1 ನೇ ಅರೋಪಿ ಮತ್ತು ಮೃತನು ಹೋಗಿದ್ದರು ಎಂದು ಹೇಳುತ್ತಿದ್ದರು. ಆದಿನ ರಾತ್ರಿ 2 ನೇ ಅರೋಪಿ ಮೃತನನ್ನು ವಾಹನದಲ್ಲಿ ತೆಗೆದುಕೊಂಡು ಹೋಗಿ ತೋಡಿಗೆ ಹಾಕಿದ್ದರು ಎಂದು ತಿಳಿದಿತ್ತು. ನನಗೆ ಪೊಲೀಸರಿಂದ ಯಾವುದೇ ವಿಷಯ ತಿಳಿದಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿದ್ದರು. ಮೃತನು ಅಪಘಾತದಲ್ಲಿ ತೀರಿದ್ದಾನೆಂದು ನನಗೆ ಅನಿಸಿರಲಿಲ್ಲ, ಆದರೆ ಊರಿನಲ್ಲಿ ನೋಡಿದವರು ಹೇಳುವುದನ್ನು ತಿಳಿದು ನನಗೆ ನಂತರ ಮೃತನನ್ನು ತೋಡಿಯಲ್ಲಿ ಹಾಕಿರುವುದಾಗಿ ತಿಳಿದಿತ್ತು.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟೀಸವಾಲು: ಸರಕಾರಿ ಅಭಿಯೋಜಕರಿಂದ:**

1) ದಿನಾಂಕ 21-05-2020 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ಚಾಸಾ -3 ಈತ ಸದಕಾಲ ಮೊಬೈಲ್ ನೋಡುತ್ತಿರುವನೆಂದು, ಚಾಸಾ-3 ಓದುತ್ತಿಲ್ಲ ಎಂದು, ಮೃತ ಆತನಿಗೆ ಬೈಯುತ್ತಿದ್ದನೆಂದು, ಅದಕ್ಕಾಗಿ 1 ನೇ ಆರೋಪಿ ಮತ್ತು ಮೃತನ ನಡುವೆ ಮಾತಾಗಿತ್ತು ಎಂದರೆ ಇರಬಹುದು. ನಂತರ 10 ಗಂಟೆಯ ಸಮಯದಲ್ಲಿ ಈ ಮೇಲಿನ ವಿಷಯವಾಗಿ ಮೃತನು 1 ನೇ ಆರೋಪಿಗೆ ಹೊಡೆಯಲು ಹೋದಾಗ,

1 ನೇ ಅರೋಪಿ, ಆತನನ್ನು ದೂಡಿದ್ದರಿಂದ, ಆತನ ತಲೆ ಗೋಡೆಗೆ ತಾಗಿ, ಪೆಟ್ಟಾಗಿ ಬಿದ್ದಿದ್ದ ಎಂದರೆ ನಾನು ನೋಡಿಲ್ಲ. ಪೊಲೀಸರು ಹೇಳಿದ್ದರಿಂದ ತಿಳಿದಿದ್ದೆ. ಆಗ 1 ನೇ ಆರೋಪಿಯ ಗಂಡನ ಪ್ರಾಣ ಹೋಗಿತ್ತು ಎಂದರೆ, ಪೊಲೀಸರು ಹೇಳಿದ್ದರಿಂದ ತಿಳಿದಿದೆ. ಅದಕ್ಕಾಗಿ ಆರೋಪಿತರು ಇಬ್ಬರು ಸೇರಿ,ಮೃತನನ್ನು ಸ್ಕೂಟರ ಸಮೇತ, ಹೆಜಮಾಡಿಯ ಗುಂಡಿಯ ರಸ್ತೆಯ ತೋಡಿಗೆ ಹಾಕಿ, ಮೃತನು ವಾಹನದಿಂದ ಅಪಘಾತದಲ್ಲಿ ತೀರಿರುವುದಾಗಿ ಕಂಡು ಬರುವಂತೆ ಗುಂಡಿಯಲ್ಲಿ ಹಾಕಿದ್ದನು ಎಂದು, ಮತ್ತು ಅದಕ್ಕಾಗಿ 2 ನೇ ಅರೋಪಿಯೇ ದೂರನ್ನು ಕೊಟ್ಟಿದ್ದನು ಎಂದು ನನಗೆ ಪೊಲೀಸರಿಂದ ತಿಳಿದಿತ್ತು ಎಂದರೆ ನಿಜ. ಈ ವಿಷಯವಾಗಿ 1 ನೇ ಅರೋಪಿ ಅಕ್ಕಪಕ್ಕದವರಿಗೆ ತನ್ನ ಗಂಡ ರಾತ್ರಿಯ 9 ಗಂಟೆಗೆ ಮನೆಯಿಂದ ಹೋಗಿದ್ದರೆಂದು ಹೇಳಿ, ಈ ವಿಷಯವಾಗಿ ನನಗೂ ಸಹ ಫೋನ್ ಮಾಡಿ ಹೇಳಿದ್ದರು ಎಂದರೆ ನಿಜ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ನನ್ನ ಮನೆಗೂ ಮತ್ತು ಆದಿನ ಮೃತನನ್ನು ಕರೆದುಕೂಂಡು ಹೋಗಿದ್ದ ಆಸ್ಪತ್ರೆಗೂ ಸುಮಾರು 10 ಕಿ.ಮೀ.ಗಳ ಅಂತರ. ನಾನು ಆಸ್ಪತ್ರೆಯ ಬಳಿ ಹೋದಾಗ ವೇಳೆ ಈಗ ನೆನಪಿಲ್ಲ. ಆದಿನ ಆಸ್ಪತ್ರೆಗೆ ನಾನು ಮೊದಲು ಹೋಗಿದ್ದೆ. ನಾನು ಹೋದ 1 – 2 ನಿಮಿಷಗಳಲ್ಲಿ ಅವರು ಬಂದಿದ್ದರು. ನಾವು ಅಜ್ಜರಕಾಡಿನ ಆಸ್ಪತ್ರೆಗೆ ಬಂದಾಗ ಸಮಯ ಸಹ ಈಗ ನೆನಪಿಲ್ಲ. ಅದರಂತೆ ಮಣಿಪಾಲದ ಆಸ್ಪತ್ರೆಗೆ ಹೋದಾಗಲೂ ಸಹ ಸಮಯ ಈಗ ನೆನಪಿಲ್ಲ. ನಾನು ಮರಳಿ ಮನೆ ತಲುಪಿದಾಗ 3-30 – 4 ಗಂಟೆಯ ಸಮಯವಾಗಿರಬಹುದು. ಮಣಿಪಾಲದ ಆಸ್ಪತ್ರೆಯಲ್ಲಿ ಸುಮಾರು 1 ಗಂಟೆಯ ಸಮಯದವರೆಗೆ ಇದ್ದೆವು. ಅಜ್ಜರಕಾಡಿನ ಆಸ್ಪತ್ರೆಯಲ್ಲಿ ಸುಮಾರು 20 ನಿಮಿಷದ ಸಮಯದವರೆಗೆ ಇದ್ದೆವು. ಪಡುಬಿದ್ರೆ ಆಸ್ಪತ್ರೆಯಿಂದ ಅಜ್ಜರಕಾಡಿನ ಆಸ್ಪತ್ರೆಗೆ ಬರಲು ಸುಮಾರು ಅರ್ಧ ಗಂಟೆಯ ಸಮಯ ಹಿಡಿದಿತ್ತು.

2) ಈ ಘಟನೆಯ ವಿಷಯವಾಗಿ ನಾನು ಠಾಣೆಗೆ 2 ಬಾರಿ ಹೋಗಿದ್ದೆ. ಅದು ಯಾವಾಗ ಎಂದರೆ, ಘಟನೆಯಾದ ಮಾರನೇ ದಿವಸ ಮತ್ತು ಘಟನೆಯಾದ ಸುಮಾರು 3 ದಿನಗಳ ನಂತರ. ತಾರೀಕು 22-05-2020 ರಂದು ನಾನು ಬೆಳಿಗ್ಗೆ

ಹೋದಾಗ ಆರೋಪಿತರಿಬ್ಬರೂ ಲೂಡಾ ಆಡುತ್ತಿದ್ದರು ಎಂದು ನಾನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಾನು ಪೊಲೀಸರಿಗೆ ಹೇಳಿಲ್ಲ. ನಾನು 1 ನೇ ಅರೋಪಿಯ ಬಳಿಯಲ್ಲಿ ಘಟನೆಯ ಬಗ್ಗೆ ವಿಚಾರಿಸಿದ್ದೆನು ಎಂದು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಾನು ಪೊಲೀಸರ ಮುಂದೆ ಹೇಳಿರಬಹುದು.

3) ಆದಿನ ನನಗೆ ಆರೋಪಿತರು ಮೃತನನ್ನು ಸ್ಕೂಟರ್ ನಲ್ಲಿ ಕರೆದುಕೊಂಡು ಹೋಗಿದ್ದರು ಎಂಬ ಬಗ್ಗೆ ಹೇಳಿದವರು ಯಾರು ಎಂದು ಗೊತ್ತಿಲ್ಲ, ಆದರೆ ಅವರು ಅಲ್ಲಿ ಸೇರಿದವರು. ಮೃತನು ಹೇಗೆ ತೀರಿದ್ದನು ಎಂದು ನನಗೆ ಪೊಲೀಸರು ಹೇಳಿದ್ದರಿಂದ ಗೊತ್ತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಈಗ ಪೊಲೀಸರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ಮೃತನನ್ನು ಕರೆದುಕೊಂಡು ಹೋಗಿದ್ದ ವಾಹನ ಡಿಜೈರ್ ಕಾರು. ಅದರ ನಂಬ್ರ ನೆನಪಿಲ್ಲ. ಮೃತನು ಅಪಘಾತದಲ್ಲಿ ತೀರಿದ್ದಾರೆ ಎಂದರೆ ಸರಿಯಲ್ಲ. ಈಗ ಪೊಲೀಸರಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ